ಶ್ರೀ ಹೆಚ್. ಎಂ. ಚನ್ನಬಸಪ್ಪ ; ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ನು ೧೯೬೫ ರಲ್ಲೇ ಸ್ಥಾಪಿತವಾಯಿತಂ. ಇದಕ್ಕೆ ಮೊದಲು ಸ್ವಲ್ಪ ಟೇತಿಂಗ್ ಟ್ರಬಲ್‌ಗಳು ಬಂದುದರಿಂದ ಇದು ಹೆಚ್ಚು ವ್ಯಾಪಕವಾಗಿ ಪರಿಣಾಮಕಾರಿಯಾದಂತಹ ಕೆಲಸಗಳನ್ನು ಮಾಡಲು ಸಾಧ್ಯವಾಗಲಿಲ್ಲ. ಇದನ್ನು ಇನ್ನೂ ಬಲಪಡಿಸಬೇಕೆಂಬುದೇ ಸರಕಾರದ ಅಭಿಪ್ರಾಯವಾಗಿದೆ.

ಶ್ರೀ ಸಿ. ಎನ್. ಪಾಟೀಲ್ : ನಾರಾಯಣಪುರ ಅಣೆಕಟ್ಟಿನ ಕೆಲಸವನ್ನು ಕಂಟ್ರಾಕ್ಟರು ಸರಿಯಾದ ಕಾಲದಲ್ಲಿ ಮುಗಿಸದಿದ್ದರೆ ಅವರಿಗೆ ಪೆನಾಲ್ಟಿ ಹಾಕುತ್ತಾರೆ. ಹಾಗಾದರೆ ಇಲ್ಲಿ ಎಂ. ಎಸ್. ಇ. ಬಿ ಯವರು ಕೆಲಸವನ್ನು ಮಾಡದೇ ಇರುವುದರಿಂದ ಇವರಿಗೂ ಪೆನಾಲ್ಟಿ ಅನ್ವಯವಾಗುತ್ತದೆಯೇ?

ಶ್ರೀ ಹೆಚ್. ಎಂ. ಚನ್ನಬಸಪ್ಪ : ಅನೀರಿಕ್ಷಿತವಾದ ಘಟನೆಗಳಿಂದ ಕಾಲವಿಳಂಬವಾದ ಪಕ್ಷದಲ್ಲಿ ಅದಕ್ಕೆ ಪೆನಾಲ್ಟಿ ವಿಧಿಸುವುದು ಯುಂಕ್ತವಲ್ಲ.

ಶ್ರೀ ಸಿ. ಎನ್. ಪಾಟೀಲ್ : ಇದುವರೆಗೆ ಎಂ. ಎಸ್. ಇ. ಬಿ. ಮೂಲಕ ಕೆಲಸ ನಡೆದಿರುವುದು ಕೇವಲ ೧೯೦ ಲಕ್ಷ ರೂಪಾಯಿಗಳ ಕೆಲಸ ಮಾತ್ರ ಎಂದರೆ ಒಂದು ರೂಪಾಯಿನ ಕೆಲಸಕ್ಕೆ ಎರಡು ರೂಪಾಯಿ ಗಳಷ್ಟು ಬಿಲ್ ಮಾಡಿದ್ದಾರೆ. ಇದು ಯೋಗ್ಯವೆ ಮತ್ತು ಇದರಲ್ಲಿ ಎಫಿಷಿಯೆನ್ಸಿ ಇದೆಯೇ ?

ಶ್ರೀ ಹೆಚ್. ಎಂ. ಚನ್ನಬಸಪ್ಪ : ಬಿಲ್ಲುಗಳಿಗೂ ಇಲ್ಲಿ ಆಗುವ ಕೆಲಸಗಳಿಗೂ ಒಂದಕ್ಕೊಂದು ಸಂಬಂಧವಿಲ್ಲ.

SUSPENSION AND DISMISSAL OF P.C. AND H.C. IN CHICKMAGALUR DISTRICT

349 **Sri G. Puttaswamy** (Mudigere) :—

Will the Chief Minister be pleased to state :—

(a) the names of Police Constables and Head Constables kept under suspension and dismissed during 1971–72 in Chickmagalur District :

(b) the reasons therefore ;

(c) since how long they are under suspension ?

Sri H. M. Channabasappa (Minister for Public Works) and Electricity (on be half of **Sri D. Devaraj Urs** (Chief Minister)

(a) One Police Constable by name Venkatanarasaiah.

(b) Official misconduct in accepting illegal gratification.

(c) From 27th May 1972 to 30th September 1972.

ಶ್ರೀ ಜಿ. ಪುಟ್ಟಸ್ವಾಮಿ : ಚಿಕ್ಕಮಗಳೂರು ಜಿಲ್ಲೆಯಲ್ಲಿ ೭೧–೭೨ ನೇ ಸಾಲಿನಲ್ಲಿ ತಾತ್ಕಾಲಿಕವಾಗಿ ಕೆಲಸದಿಂದ ತೆಗೆದವರು ಒಬ್ಬರು ಎಂದು ಹೇಳಿದ್ದೀರಿ. ಇದನ್ನು ೨೭–೫–೭೨ ರಲ್ಲಿ ತೆಗೆದುಹಾಕಿದೆ ಎಂದು ಹೇಳುವುದು ರೆಲವೆಂಟ್ ಆಗುವುದಿಲ್ಲ. ಇಲ್ಲಿ ಅನೇಕ ಜನ ಹರಿಜನರನ್ನು ಹಾಗೂ ಗಿರಿಜನರನ್ನು ಕೆಲಸದಿಂದ ತೆಗೆದುಹಾಕಿದ್ದಾರೆ. ಅವರ ಮೇಲೆ ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಂಡಿದ್ದಾರೆ. ಇದರಲ್ಲಿ ಒಬ್ಬರು ಪೋಲಿಸು ಸೂಪರಿಂಟೆಂಡೆಂಟರ ಮೇಲೆ ಅಸಾಲ್ಟ್ ಮಾಡಿದರು ಎಂದು ವರದಿ ಬಂದಿಲ್ಲವೇ ?

† ಶ್ರೀ ಹೆಚ್. ಎಂ. ಚನ್ನಬಸಪ್ಪ : ಮೊದಲು ತಾವು ಪ್ರಶ್ನೆ ಕೇಳಿರುವುದು ಸರಿಯಲ್ಲ. ತಾವು ಕೇಳಿರ ತಕ್ಕ ಪ್ರಶ್ನೆಯಲ್ಲಿ ೭೧–೭೨ ನೇ ಸಾಲಿನಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ಜನರು ಸಸ್‌ಪೆಂಡ್ ಆಗಿದ್ದರು ಎಂದು ಕೇಳಿದುದರಿಂದ ಅದಕ್ಕೆ ತಕ್ಕಂತೆ ಮಾತ್ರ ಉತ್ತರಗಳನ್ನು ಕೊಡಲಾಗಿದೆ. ಎರಡನೇದು

ಇದರಲ್ಲಿ ವಿಚಾರಣೆ ನಡೆಸತಕ್ಕದ್ದು ಮತ್ತು ಕೆಲಸದಿಂದ ತೆಗೆಯತಕ್ಕದ್ದು ಅಥವಾ ಬಿಡತಕ್ಕದ್ದು ಇದನ್ನು ಜಾತೀಯ ಆಧಾರದ ಮೇಲೆ ಮಾಡುತ್ತಿಲ್ಲ. ಯಾರೇ ಆಗಲಿ ತಪ್ಪಿತಸ್ಥರು. ಯಾವಾಗಲೂ ತಪ್ಪಿತಸ್ಥರೇ ಈ ವಿಷಯವನ್ನು ಗವಂನಕ್ಕೆ ತೆಗೆದುಕೊಂಡು ಮಾಡಬೇಕಾಗುತ್ತದೆ. ಇದರಲ್ಲಿ ಜಾತೀಯತೆ ಪ ಶ್ನೆ ಇಲ್ಲ.

ಶ್ರೀ ಜಿ. ಪುಟ್ಟಸ್ವಾಮಿ : ನನ್ನ ಪ್ರಶ್ನೆ ಜಾತಿಯ ಮೇಲೆ ಇಲ್ಲ. ಯಾವುದಾದರೂ ನಿರಪರಾಧಿಗಳಾದ ನೌಕರರಿಗೆ ಪ್ರಿಜ್ಯುಡಿಸ್‌ನಿಂದ ಅವರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುವುದು ಸರಿಯಲ್ಲ, ಇಂತಹವನ್ನು ಸರಕಾರದ ಗವಂನಕ್ಕೆ ತಂದರೆ ಆದನ್ನು ವಿಚಾರಮಾಡಿ ನ್ಯಾಯ ದೊರಕಿಸಿಕೊಡುತ್ತೀರಾ ?

ಶ್ರೀ ಹೆಚ್. ಎಂ. ಚನ್ನಬಸಪ್ಪ : ನಿರಪರಾಧಿಗಳಿಗೆ ಸರಕಾರ ಶಿಕ್ಷೆಮಾಡುತ್ತದೆ ಎನ್ನುವ ಭಾವನೆ ವಂನಸ್ಸಿನಲ್ಲಿಟ್ಟುಕೊಂಡಿದ್ದರೆ ಅದು ತಪ್ಪು.

SUSPENSION OF P. W. D. OFFICERS

446. SRI H. D. DEVE GOWDA (Holenarasipur):—

Will the Minister for Public Works and Electricity be pleased to state:—

(*a*) the number of officers of Public Works Department were suspended and the nature of charges levelled against them (particulars in respect of each offieer may kindly be furnished);

(*b*) the number of cases referred to the Vigilance Commission for enquiry and the number of cases in respect of which the departmental enquiry conducted;

(*c*) the number of cases in respect of which the enquiry is completed;

(*d*) whether the Government has accepted the enquiry report?

SRI H. M. CHANNABASAPPA (Minister for Public Works and Electricty):—

(*a*) Necessary particulars are given in the statement appended

(*b*) Seven cases covering II officers have been entrusted to Vigilance Commissioner for eaquiry and in all of them enquiry is being conducted.

(*c*) Three.

(*d*) One accepted; one Rejected; and the third is under consideration.